40 ವರ್ಷಗಳ ಹಿಂದೆ ಮಕ್ಕಳು ಅವಿಭಕ್ತ ಕುಟುಂಬಗಳಲ್ಲಿ ಬೆಳೆಯುತ್ತಿದ್ದರಿಂದ ಸಂಬಂಧಗಳ ಮೌಲ್ಯ, ದೇಶ ಹಾಗೂ ಸಮಾಜದ ಬಗ್ಗೆ ಗೌರವ ಹೊಂದಿರುತ್ತಿದ್ದರು. ಇಂದಿನ ವಿಭಜಿತ ಕುಟುಂಬಗಳ ಮಕ್ಕಳು ಬಹುತೇಕ ವಸತಿ ನಿಲಯಗಳಲ್ಲಿ ಬೆಳೆಯುತ್ತಾರೆ. ಇಂಥ ಮಕ್ಕಳಿಗೆ ಪ್ರೀತಿ ವಾತ್ಸಲ್ಯದಿಂದ ಭವಿಷ್ಯ ರೂಪಿಸಬೇಕು. ಮೇಲ್ವಿಚಾರಕರು ವೇತನಕ್ಕಾಗಿ ಸೇವೆ ಸಲ್ಲಿಸದೆ ಮಕ್ಕಳಲ್ಲಿ ಸೃಜನಶೀಲತೆ ಬೆಳವಣಿಗೆಗಾಗಿ ಶ್ರಮಿಸಬೇಕು

• **ಡಾ.ದೇವರಾಜ್** ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ



## ಸಣ್ ಸುದ್ದಿ

### ಕ್ರೀಡಾ ಸಾಧಕರಿಗೆ ಆದ್ಯತೆ ನೀಡಿ: ಗಿರಿಜಾ

**ತುಮಕೂರು:** ಕ್ರೀಡೆಯಲ್ಲಿ ಸಾಧನೆ ತೋರಿದವರಿಗೆ ವಿವಿಧ ರಂಗಗಳಲ್ಲಿ ಆದ್ಯತೆ ದೊರೆಯಬೇಕು ಎಂದು ಮಹಾನಗರ ಪಾಲಿಕೆ ಸದಸ್ಯೆ ಗಿರಿಜಾ ಧನಿಯಕುಮಾರ್ ಸಲಹೆ ನೀಡಿದರು. ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ತಿಪಟೂರಿನ ಡಾ.ಬಿ.ಆರ್. ಅಂಬೇಡ್ಕರ್ ಯುವಜನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಶಿರಾ ವಾಸುದೇವ ಚಾರಿಟಬಲ್ ಟ್ರಸ್ಟ್ ಗಳ ಸಹಯೋಗದಲ್ಲಿ ಇತ್ತೀಚಿಗೆ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಯುವ ಸಂಘಗಳ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ದರು. ಕ್ರೀಡೆಗಳು ಮನೋಲ್ಲಾಸ ನೀಡುತ್ತವೆ. ಯುವ ಜನತೆ ಮೊಬೈಲ್ ಗೀಳನ್ನು ಬಿಟ್ಟು ಕ್ರೀಡಾ ಚಟುವಟಿಕೆ ಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕಿವಿ ಮಾತು ಹೇಳಿದರು. ಕ್ರೀಡಾಕೂಟದಲ್ಲಿ ಸಿದ್ಧಾರ್ಥ ಕಾಲೇಜಿನ ಡಾ.ವೈ.ಎಂ. ರೆಡ್ಡಿ, ಲೆಕ್ಕಾಧಿಕಾರಿ ಬಸವ ರಾಜು, ಸಂಯೋಜನಾಧಿಕಾರಿ ಕೃಷ್ಣ ಉಪಸ್ಥಿತರಿದ್ದರು.

### ಇಂದು 'ಊರ್ಮಿಳೆ' ಪ್ರದರ್ಶನ

**ತುಮಕೂರು:** ಇಲ್ಲಿನ ಝುನ್ ಟೀಮ್ ವತಿಯಿಂದ ಶುಕ್ರವಾರ ಸಂಜೆ 6.45ಕ್ಕೆ ತುಮಕೂರಿನ ಅಮಾನಿಕೆರೆ



ಎದುರು ಇರುವ ಜಿಲ್ಲಾ ಕನ್ನಡ ಭವನದಲ್ಲಿ 'ಊರ್ಮಿಳೆ' ಎಂಬ ವಿಭಿನ್ನ ಏಕವ್ಯಕ್ತಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಝುನ್ ಟೀಮ್‌ನ ಉಗಮ ಶ್ರೀನಿವಾಸ್ ತಿಳಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಈ ನಾಟಕ ಪ್ರದರ್ಶನ ನಡೆಯಲಿದೆ. ಎಚ್.ಎಸ್. ವೆಂಕಟೇಶಮೂರ್ತಿ ಅವರ ಈ ಕೃತಿಯನ್ನು ಶ್ರೀಪಾದ ಭಟ್ ನಿರ್ದೇಶಿಸಲಿದ್ದಾರೆ. ಸುಮಾರು 1 ಗಂಟೆಗಳ ಕಾಲ ಪ್ರತಿಭಾ ಸಾಗರ್ ಅವರು ಅಭಿನಯಿಸಲಿದ್ದಾರೆ. ನಾಟಕ ಪ್ರದರ್ಶನಕ್ಕೆ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ಚಾಲನೆ ನೀಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಬಾ.ಹ.ರಮಾಕುಮಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಆಪಿನಕಟ್ಟೆ ಬಸವರಾಜಪ್ಪ, ಹೋರಾಟಗಾರ ಕೊಟ್ಟ ಶಂಕರ್ ಆಗಮಿಸಲಿದ್ದಾರೆ. ನಾಟಕ ಪ್ರದರ್ಶನಕ್ಕೆ ಉಚಿತ ಪ್ರವೇಶವಿದೆ ಎಂದು ಅವರು ತಿಳಿಸಿದ್ದಾರೆ.

### ಹಿರಿಯ ಪತ್ರಕರ್ತ ರಾಮಣ್ಣರಿಗೆ ಶ್ರದ್ಧಾಂಜಲಿ

**ಕೊರಟಗೆರೆ:** ಹಿರಿಯ ಪತ್ರಕರ್ತ ನಗೆ ಮುಗುಳು ಹಾಸ್ಯ ಪತ್ರಿಕೆಯ ಸಂಪಾದಕ ಎಚ್.ಎಸ್.ರಾಮಣ್ಣ ಅವರ ನಿಧನಕ್ಕೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶ್ರದ್ಧಾಂಜಲ್ಲಿ ಸಲ್ಲಿಸಲಾಯಿತು.ಈ ವೇಳೆ ತಾಲೂಕು ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಕೆ.ವಿ.ಪುರುಷೋತ್ತಮ್ ಮಾತನಾಡಿ, ಜಿಲ್ಲೆಯಲ್ಲಿ 30 ವರ್ಷಗಳ ಕಾಲ ತುಮಕೂರು ವಾರ್ತೆ ದಿನಪತ್ರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ರಾಮಣ್ಣ ಅವರು ನಂತರ ನಗೆಮುಗುಳು ಹಾಸ್ಯ ಮಾಸ ಪತ್ರಿಕೆ ಆರಂಭಿಸಿ ಹಾಸ್ಯ ಸಾಹಿತ್ಯ ಬರೆದು ಯುವ ಬರಹಗಾರಿಗೆ ಅವಕಾಶ ನೀಡಿ ಪ್ರತಿಕಾ ಸೇವೆ ಸಲ್ಲಿಸಿದರು ಎಂದು ಸ್ಮರಿಸಿದರು. ಮುಂದಿನ ದಿನಗಳಲ್ಲಿ ಪತ್ರಿಕಾ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುವ ಪತ್ರಕರ್ತರನ್ನು ಗುರುತಿಸಿ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ ಪ್ರಶಸ್ತಿ ನೀಡುವ ಮೂಲಕ ಅವರ ಪತ್ರಿಕಾ ಸೇವೆಯನ್ನು ಗುರುತಿಸಬೇಕು ಎಂದು ಒತ್ತಾಯಿಸಿ ಮೃತರ ಕುಟುಂಬಕ್ಕೆ ಅವರ ಅಗಲಿಕೆ ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು. ಹಿರಿಯ ಪತ್ರಕರ್ತ ಎನ್.ಪದ್ಮನಾಭ್ ಹಿರಿಯ ಪತ್ರಕರ್ತರ ನಿಧನ ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟವಾಗಿದ್ದು, ಜಿಲ್ಲೆಯಲ್ಲಿ ಪತ್ರಕರ್ತರಿಗೆ ಮಾರ್ಗದರ್ಶನ ನೀಡುತ್ತಾ ಪತ್ರಿಕಾ ರಂಗದಲ್ಲಿ ಅನೇಕ ಪತ್ರಕರ್ತರು ಬೆಳೆಯಲು ಕಾರಣೀಭೂತರಾಗಿದ್ದರು ಎಂದು ಸ್ಮರಿಸಿದರು. ಸಂತಾಪ ಸಭೆಯಲ್ಲಿ ಪಪಂ ಮಾಜಿ ಉಪಾಧ್ಯಕ್ಷ ಕೆ.ವಿ.ಮಂಜುನಾಥ್, ಪತ್ರಕರ್ತರಾದ ರಂಗಧಾಮಯ್ಯ, ಜಿ.ಎಲ್.ಸುರೇಶ್, ಶ್ರೀನಿವಾಸ್, ರಾಘವೇಂದ್ರ, ಶಿವಾನಂದ, ರಮೇಶ್, ತಿಮ್ಮರಾಜು, ಕೆ.ಬಿ.ಲೋಕೇಶ್, ನಾಗರಾಜು, ಸತೀಶ್, ಹರೀಶ್ ಸೇರಿದಂತೆ ಇನ್ನಿತರರು ಹಾಜರಿದ್ದು ಮೃತರಿಗೆ ಸಂತಾಪ ಸೂಚಿಸಿದರು.



ತುಮಕೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಯುವ ಸಂಘಗಳ ಕ್ರೀಡಾಕೂಟವನ್ನು ಗಣ್ಯರು ಉದ್ಘಾಟಿಸಿದರು. ಪಾಲಿಕೆ ಸದಸ್ಯೆ ಗಿರಿಜಾ, ರೆಡ್ಡಿ, ಸಿದ್ಧಾರ್ಥ ಕಾಲೇಜಿನ ಡಾ.ವೈ.ಎಂ. ರೆಡ್ಡಿ, ಲೆಕ್ಕಾಧಿಕಾರಿ ಬಸವ ರಾಜು, ಸಂಯೋಜನಾಧಿಕಾರಿ ಕೃಷ್ಣ ಉಪಸ್ಥಿತರಿದ್ದರು.



ಕೊರಟಗೆರೆ ತಾಲೂಕಿನ ಕಾರ್ಯನಿರತ ಪತ್ರಕರ್ತ ಸಂಘದಿಂದ ಹಿರಿಯ ಪತ್ರಕರ್ತ ರಾಮಣ್ಣ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಪತ್ರಕರ್ತ ಸಂಘದ ಅಧ್ಯಕ್ಷ ಕೆ.ವಿ.ಪುರುಷೋತ್ತಮ್, ಪಪಂ ಮಾಜಿ ಉಪಾಧ್ಯಕ್ಷ ಕೆ.ವಿ.ಮಂಜುನಾಥ್ ಇತರರಿದ್ದರು.



ಶಿರಾ ತಾಲೂಕಿನ ಚಿಕ್ಕಬಾಣಗೆರೆ ಸರಕಾರಿ ಶಾಲೆಗೆ ಶುದ್ಧ ಕುಡಿವ ನೀರಿನ ಘಟಕವನ್ನು ಕೊಡುಗೆ ನೀಡಿದ ಸಮಾಜ ಸೇವಕ ಡಾ.ಎಂ.ರಾಜೇಶ್‌ಗೌಡರನ್ನು ಸನ್ಮಾನಿಸಲಾಯಿತು. ಗುಜ್ಜಾರಪ್ಪ, ಅಜ್ಜೇಗೌಡ, ಪ್ರಕಾಶ್‌ಗೌಡ, ಚಂದ್ರಪ್ಪ, ದಯಾನಂದಗೌಡ, ಎಚ್.ಎಸ್.ಸತೀಶ್ ಇದ್ದರು.

# ಭ್ರೂಣಾವಸ್ಥೆಯಿಂದಲೇ ಮಕ್ಕಳ ಶೋಷಣೆ

## ಬಡತನ, ಲಿಂಗ ತಾರತಮ್ಯ, ಮತ್ತಿತರ ಕಾರಣಗಳಿಗಾಗಿ ಮಹಿಳೆಯರ ನಂತರ ಹೆಚ್ಚಿನ ಶೋಷಣೆಗೊಳಗಾಗುವರು ಮಕ್ಕಳೇ: ಬಾದಾಮಿಕರ್

• **ಕನ್ನಡಪ್ರಭ ವಾರ್ತೆ** ತುಮಕೂರು

ಮಕ್ಕಳು ಭ್ರೂಣಾವಸ್ಥೆಯಿಂದಲೇ ಶೋಷಣೆ ಗೊಳಗಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲವೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರಾಜೇಂದ್ರ ಬಾದಾಮಿಕರ್ ವಿಷಾದಿಸಿದರು.

ಜಿಲ್ಲಾಡಳಿತ, ಜಿಪಂ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಹಯೋಗದಲ್ಲಿ ಜಿಲ್ಲಾಸ್ಪತ್ರೆ ಆಡಿಟೋರಿಯಂನಲ್ಲಿ ವಸತಿ ನಿಲಯಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ರಕ್ಷಣಾ ನೀತಿ ಕುರಿತು ವಿವಿಧ ಇಲಾಖೆಗಳಡಿ ನಡೆಯುತ್ತಿರುವ ವಸತಿ ನಿಲಯಗಳ ಮೇಲ್ವಿಚಾರಕರಿಗಾಗಿ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ರಕ್ಷಣೆ, ಬಾಲ್ಯ, ಸುರಕ್ಷತೆ ಪ್ರತಿಯೊಬ್ಬರ ನಾಗರಿಕನ ಕರ್ತವ್ಯ. ಮಕ್ಕಳಿಗೆ ಸಂಬಂಧಿಸಿದಂತೆ ಸಾಕಷ್ಟು ಹಕ್ಕುಗಳನ್ನು ಸಂವಿಧಾನದಲ್ಲಿ ನೀಡಲಾಗಿದೆ. ಸಮಾಜದಲ್ಲಿ ಭ್ರೂಣಾವಸ್ಥೆಯಿಂದ ಪ್ರೌಢಾವಸ್ಥೆ ತಲುಪುವವರೆಗೂ ವಿವಿಧ ಹಂತಗಳಲ್ಲಿ ಮಕ್ಕಳು ಶೋಷಣೆಗೊಳಗಾಗುತ್ತಲೇ ಇದ್ದಾರೆ. ಸಾಮಾನ್ಯವಾಗಿ ಬಡತನ, ಲಿಂಗ ತಾರತಮ್ಯ ಮತ್ತಿತರ ಕಾರಣಗಳಿಗಾಗಿ ಮಹಿಳೆಯರ ನಂತರ ಹೆಚ್ಚಿನ ಶೋಷಣೆಗೊಳಗಾಗುವರು ಮಕ್ಕಳೇ ಆಗಿದ್ದು, ದೇಶವನ್ನು ಮುನ್ನಡೆಸಬೇಕಾದ ಮಕ್ಕಳ ಜವಾಬ್ದಾರಿ ನಮ್ಮ ಮೇಲಿದೆ. ಅವರನ್ನು ನಿರ್ಲಕ್ಷಿಸದೆ ಉತ್ತಮ ನಾಗರಿಕರನ್ನಾಗಿ ರೂಪಿಸುವ ಹೊಣೆ ನಮ್ಮದು ಎಂದು ತಿಳಿಸಿದರು.

> **ಯಾವುದೇ ವಿಷಯವನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದಾರೆ? ಅವರ ಬೆಳವಣಿಗೆ ಯಾವ ರೀತಿ ಇರಬೇಕು? ಎಂದು ಹಿರಿಯರಾದ ನಾವು ವಿಚಾರ ಮಾಡುವುದೇ ಇಲ್ಲ. ಈ ನಿಟ್ಟಿನಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಅಧಿಕಾರಿಗಳಲ್ಲದೆ ಪೋಷಕರಿಗೂ ಇಂತಹ ಅರಿವು ಕಾರ್ಯಾಗಾರ ಏರ್ಪಡಿಸಬೇಕು**
>
> • **ರಾಜೇಂದ್ರ ಬಾದಾಮಿಕರ್**
> ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ

ಅಂಕಗಳ ಮೇಲೆ ಬುದ್ಧಿಮಟ್ಟ ಅಳೆಯಬೇಡಿ:

ಶಾಲೆಯಲ್ಲಿ ಹೆಚ್ಚಿನ ಅಂಕ ಗಳಿಸಬೇಕೆಂದು ಪೋಷಕರು ಮಕ್ಕಳ ಮೇಲೆ ಒತ್ತಡ ಹಾಕದೆ ತಮ್ಮ ಬಾಲ್ಯಾವಸ್ಥೆಯನ್ನು ಮುಕ್ತವಾಗಿ ಅನುಭವಿಸಲು ಅವಕಾಶ ಮಾಡಿಕೊಡಬೇಕು. ಮಕ್ಕಳು ಪುಸ್ತಕದ ಹುಳುವಾಗಬೇಕೆಂದು ಎಲ್ಲ ಪೋಷಕರು ಬಯಸುತ್ತಾರೆ. ಸಾಮಾನ್ಯ ಜ್ಞಾನಕ್ಕಿಂತ ಮೀರಿದ ಜ್ಞಾನ ಮತ್ತೊಂದಿಲ್ಲ. ಅವರು ಗಳಿಸುವ ಅಂಕಗಳ ಆಧಾರದ ಮೇಲೆ ಮಕ್ಕಳ ಬುದ್ಧಿಮಟ್ಟವನ್ನು ಅಳೆಯಲು ಸಾಧ್ಯವಿಲ್ಲ ಎಂದರು.

ದಾರಿ ತಪ್ಪಿದ್ದಾರಾ ಉದ್ಯೋಸ್ಥರ ಮಕ್ಕಳು?:



ತುಮಕೂರಿನ ಜಿಲ್ಲಾಸ್ಪತ್ರೆ ಆಡಿಟೋರಿಯಂನಲ್ಲಿ ವಸತಿ ನಿಲಯಗಳ ಮೇಲ್ವಿಚಾರಕರಿಗೆ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಂದ್ರ ಬಾದಾಮಿಕರ್

ತಂದೆ-ತಾಯಿಗಳಿಬ್ಬರೂ ಉದ್ಯೋಗಸ್ಥರಾಗಿರುವ ಮಕ್ಕಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಇಂಥ ಮಕ್ಕಳು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿ, ಮಾದಕ ವ್ಯಸನಿ, ಮಾನಸಿಕ ಖಿನ್ನತೆಗಳಿಂದ ಬಳಲುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಮಕ್ಕಳು ವಸತಿ ನಿಲಯಗಳಲ್ಲಿ ಕನಿಷ್ಠ ಒಂದೆರಡು ವರ್ಷವಾದರೂ ವ್ಯಾಸಂಗ ಮಾಡಿದರೆ ಭಿನ್ನ ಮನಸ್ಕ, ಸಂಸ್ಕೃತಿ, ಪ್ರದೇಶಗಳಿಂದ ಬಂದ ಮಕ್ಕಳೊಂದಿಗೆ ಬೆರೆತು ಅವರ ಬುದ್ಧಿ ವಿಕಸನವಾಗುತ್ತದೆ. ವಸತಿ ನಿಲಯಗಳಲ್ಲಿ ಬೆಳೆದ ಮಕ್ಕಳಿಗೆ ತಂದೆ-ತಾಯಿಯರ ಮಹತ್ವ ಅರಿವಾಗುತ್ತದೆ. ಅಲ್ಲದೆ ತಮ್ಮ ಭಾವನೆ, ಆಂತರಿಕ ವಿಷಯಗಳನ್ನು ಸ್ನೇಹಿತರೊಂದಿಗೆ ಹಂಚಿಕೊಂಡು ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಅವಕಾಶವಾಗುತ್ತದೆ ಎಂದು ತಿಳಿಸಿದರು.

**ಮೇಲ್ವಿಚಾರಕರು ಮಾದರಿಯಾಗಲಿ:** ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ.ದೇವರಾಜ್ ಮಾತನಾಡಿ, ವಸತಿ ನಿಲಯದಲ್ಲಿ ಓದುತ್ತಿರುವ ಮಕ್ಕಳು ಬಾಲವಾಡಿಯಿಂದ ಪ್ರಾರಂಭವಾಗಿ ಪದವಿ ತರಗತಿವರೆಗೆ ನಿಲಯದ ಮೇಲ್ವಿಚಾರಕರ ಒಡನಾಟದಲ್ಲಿ ಬೆಳೆಯುತ್ತಾರೆ. ಮಕ್ಕಳು ತಮ್ಮ ಬಾಲ್ಯದ ಶೇ.70 ಭಾಗದ ಜೀವನವನ್ನು ವಸತಿ ನಿಲಯಗಳಲ್ಲಿ ಕಳೆಯುವುದರಿಂದ ಅಲ್ಲಿನ ವಾತಾವರಣ ಹಾಗೂ ಅಧಿಕಾರಿಗಳನ್ನು ಅನುಕರಿಸುವುದರಿಂದ ವಸತಿ ನಿಲಯಗಳ ಮೇಲ್ವಿಚಾರಕರು ಅವರಿಗೆ ಮಾದರಿಯಾಗಿರಬೇಕು. ಮಕ್ಕಳ ಬಾಲ್ಯವನ್ನು ಕಸಿಯದೆ ಅವರಿಗಿರುವ ಹಕ್ಕುಗಳ ರಕ್ಷಣೆ ಮಾಡುವುದು ನಿಮ್ಮ ಜವಾಬ್ದಾರಿ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಪಂ ಸಿಇಒ ಶುಭಾ ಕಲ್ಯಾಣ್ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ, ವಿಶೇಷ ಜ್ಞಾನವನ್ನು ಹುಡುಕಿ ಬೆಳಕಿಗೆ ತರುವ ಪ್ರಯತ್ನ ಮಾಡಬೇಕು. ಮಕ್ಕಳಿಗೆ ಉತ್ತಮ ವಾತಾವರಣ ಸೃಷ್ಟಿಸಬೇಕು. ಮಕ್ಕಳು ಸೈಬರ್ ಅಪರಾಧಗಳಲ್ಲಿ ಹೆಚ್ಚಾಗಿ ಭಾಗಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ನಿಟ್ಟಿನಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಸ್ಮಾರ್ಟ್ ಫೋನ್‌ಗಳಿಂದ ದೂರವಿಡಬೇಕು. ಹೆಣ್ಣಿರಲಿ, ಗಂಡಿರಲಿ 3 ವರ್ಷದ ಮಕ್ಕಳಿಂದ ಹಿಡಿದು ಪ್ರೌಢಾವಸ್ಥೆಯವರೆಗಿನ ಮಕ್ಕಳಿಗೆ ಗುಡ್ ಟಚ್ ಹಾಗೂ ಬ್ಯಾಡ್ ಟಚ್ ಬಗ್ಗೆ ತಿಳಿವಳಿಕೆ ಹೇಳಬೇಕು ಎಂದು ಕಿವಿಮಾತು ಹೇಳಿದರು. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ಆರ್.ರಾಜಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾ ಧಿಕಾರಿ ವಾಸಂತಿ ಉಪ್ಪಾರ್ ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಸ್.ನಟರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ಕೊಪ್ಪಳದ ಮಕ್ಕಳ ಸಂರಕ್ಷಣಾ ಯೋಜನೆಯ ಸಂಯೋಜಕ ರಾಘವೇಂದ್ರ ಭಟ್.ಕೆ. ಉಪನ್ಯಾಸ ನೀಡಿದರು. ಅಂಬಿಕಾ ವಂದಿಸಿದರು.

# ಸೌಮ್ಯ ಬರವಣಿಗೆಯಿಂದ ಜನಮನ ಗೆದ್ದಿದ್ದ ರಾಮಣ್ಣ: ಪ್ರಸನ್ನಮೂರ್ತಿ



ಪಾವಗಡದಲ್ಲಿ ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತ ಎಚ್‌ಎಸ್.ರಾಮಣ್ಣ ನಿಧನಕ್ಕೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಪಾವಗಡ

ಸೌಮ್ಯ ಬರವಣಿಗೆಯಿಂದಲೇ ಟೀಕಿಸಿ ಅಧಿಕಾರಿ ಹಾಗೂ ರಾಜಕಾರಣಿಗಳಿಗೆ ಎಚ್ಚರಿಸುವ ಮೂಲಕ ಜನಮನ್ನಣೆಗಳಿಸಿದ್ದ ಎಚ್.ಎಸ್.ರಾಮಣ್ಣ ಹೃದಯಾಘಾತದಿಂದ ನಿಧನರಾಗಿದ್ದು ಅವರ ಸಾವು ನಿಜಕ್ಕೂ ಅಘಾತ ತಂದಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಪ್ರಸನ್ನಮೂರ್ತಿ ಸಂತಾಪ ವ್ಯಕ್ತಪಡಿಸಿದರು.

ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತ ಎಚ್.ಎಸ್. ರಾಮಣ್ಣ ಅವರಿಗೆ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರ ಸಂಘದಿಂದ ಏರ್ಪಡಿಸಿದ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಪತ್ರಿಕಾ ರಂಗದಲ್ಲಿ ಅಭೂತಪೂರ್ವ ಸಾಧನೆ ಮಾಡಿದ್ದಾರೆ. ಅವರ ಸಾವು ಊಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಜಿಲ್ಲೆ ಹಾಗೂ ರಾಜ್ಯಕ್ಕೆ ಅತ್ಯಂತ ತುಂಬಲಾರದ ನಷ್ಟ ಉಂಟಾಗಿದೆ ಎಂದರು.

ಸುದ್ದಿ ವಿಚಾರದಲ್ಲಿ ಎಂದೂ ರಾಜಿಯಾದವರೆ ಅಲ್ಲ, ಉತ್ತಮ ಸಾಹಿತ್ಯದೊಂದಿಗೆ ಪತ್ರಿಕೆ ಹೊರತರುತ್ತಿದ್ದರು. ಇಂತಹ ಒಬ್ಬ ದೀಮಂತ ಪತ್ರಕರ್ತರನ್ನು ಕಳೆದುಕೊಂಡು ಅನಾಥ ಭಾವ ಕಾಡುತ್ತಿದೆ. ಅವರ ಸಾವಿನ ಸುದ್ದಿ ನಿಜಕ್ಕೂ ಆಘಾತ ತಂದಿದೆ. ತುಂಬಲಾರದ ನಷ್ಟ ಅನುಭವಿಸಿದ್ದಾಂತಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಅವರ ಕುಟುಂಬಕ್ಕೆ ದುಃಖಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಜಿಲ್ಲಾ ಕೆಡ್ಲೂಜೆಯು ಮಾಜಿ ಗ್ರಾಮಾಂತರ ಉಪಾಧ್ಯಕ್ಷ ಗೋರಸ್ ಮಾವು ಹನುಮಂತರಾಯಪ್ಪ, ತಾಲೂಕು ಅಧ್ಯಕ್ಷ ಎಚ್.ರಾಮಾಂಜಿನಪ್ಪ, ಉಪಾಧ್ಯಕ್ಷ ದವಡಬೆಟ್ಟ ಜಿ.ಎನ್. ನಾಗರಾಜ್, ಪತ್ರಕರ್ತರಾದ ಕೆ.ಪಿ.ನಾಗೇಂದ್ರ, ಕೆ.ಆರ್.ಜಯಸಿಂಹ, ಇಮ್ರಾನ್ ರಾಮಾಂಜಿನಪ್ಪ, ವೀರಸೇನಾ, ಗೋಪಾಲನಾಯಕ್, ಕೆ.ರಾಂಪುರ ನಾಗೇಶ್, ಸಾಸಲಕುಂಟೆ ನಾಗೇಂದ್ರಪ್ಪ, ವಡ್ಡೆ ಶ್ರೀನಿವಾಸ್, ಹೊಸದಿಗಂತ ನಾಗೇಂದ್ರ, ಗೋವರ್ಧನ ಹಾಗೂ ಸಂಘದ ಹಲವಾರು ಮಂದಿ ಇದ್ದರು.

# ಸ್ಮಾರ್ಟ್ ಕ್ಲಾಸ್ ರೂಂಗೆ ಶಾಸಕರ ಚಾಲನೆ

• **ಕನ್ನಡಪ್ರಭ ವಾರ್ತೆ** ತುಮಕೂರು

ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದ ಎಂಪ್ರೆಸ್ ಶಾಲೆಯಲ್ಲಿ ನಿರ್ಮಿಸಿರುವ ಸ್ಮಾರ್ಟ್ ಕ್ಲಾಸ್ ರೂಂನ್ನು ಶಾಸಕ ಜಿ.ಬಿ.ಜ್ಯೋತಿ ಗಣೇಶ್ ಉದ್ಘಾಟಿಸಿದರು. ಸ್ಮಾರ್ಟ್ ಕ್ಲಾಸ್ ರೂಂ ಉದ್ಘಾಟಿಸಿ ಮಾತನಾಡಿದ ಅವರು, ಸ್ವತಂತ್ರ ಪೂರ್ವದಲ್ಲಿ ಸ್ಥಾಪನೆಯಾದ ಎಂಪ್ರೆಸ್ ಶಾಲೆಯು ನಗರದ ಹೃದಯ ಭಾಗದಲ್ಲಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಮಾರ್ಟ್ ಕ್ಲಾಸ್ ನಿರ್ಮಾಣ ಮಾಡಿರುವುದು ಜಿಲ್ಲೆಯ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ನಗರದ ಸರ್ಕಾರಿ ಪ್ರೌಢಶಾಲೆಗೆ ಹಾಗೂ ಎಂಪ್ರೆಸ್ ಶಾಲೆಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ತೆಗೆದು ತಿಳಿದುಕೊಂಡು ಅಂತರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ರೂಂ, ಲೈಬ್ರರಿ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಿದ ಅಂತರಾಷ್ಟ್ರೀಯ ಮಟ್ಟದ ಶಾಲೆಯನ್ನಾಗಿ ನಿರ್ಮಾಣ ಮಾಡಲಾಗುವುದು ಎಂದು ಅವರು ತಿಳಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಹೆಚ್ಚಿನ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಇನ್ನಷ್ಟು ಅನುದಾನ ನೀಡುವಂತೆ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ಸೂಚಿಸಿದರು. ಶಾಲೆಯಲ್ಲಿ ಒದಗಿಸಿರುವ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ನಿಮ್ಮ ಪಠ್ಯ ಕ್ರಮಕ್ಕೆ ತಕ್ಕಂತೆ ಡಿಜಿಟಲ್ ಪಠ್ಯಕ್ರಮ ರೂಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಒಂದು ಬಾರಿ ಮನನವಾಗದಿದ್ದರೆ ಮತ್ತೊಮ್ಮೆ ಕೇಳಿ ಅರ್ಥ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳು ಈ



ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ಸ್ಮಾರ್ಟ್ ಆಗಿ ಹೊರಹೊಮ್ಮಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕೆ.ರಾಕೇಶ್ ಕುಮಾರ್, ಎಸ್ಪಿ ಡಾ.ಕೊನ ವಂಶಿಕೃಷ್ಣ, ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂ.ಡಿ.ರಂಗಸ್ವಾಮಿ, ಅಜಯ್, ಎಂಪ್ರೆಸ್ ಕಾಲೇಜಿನ ಶಿಕ್ಷಕ ಸಿದ್ದಲಿಂಗಪ್ಪ ಮತ್ತಿತರರು ಹಾಜರಿದ್ದರು.

# ಕ್ಷುಲ್ಲಕ ಕಾರಣ: ಆಟೋ ಚಾಲಕನ ಬರ್ಬರ ಕೊಲೆ

## ತುಮಕೂರು ನಗರದಲ್ಲಿ ಘಟನೆ | ರಾಂಗ್ ಸೈಡ್‌ನಲ್ಲಿ ಬಂದ ಎಂದು ಗಲಾಟೆ ತೆಗೆದ ಆರೋಪಿಗಳು

• **ಕನ್ನಡಪ್ರಭ ವಾರ್ತೆ** ತುಮಕೂರು

ಕ್ಷುಲ್ಲಕ ಕಾರಣಕ್ಕೆ ನಡೆದ ಗಲಾಟೆ ಬರ್ಬರವಾಗಿ ಆಟೋ ಚಾಲಕನೊಬ್ಬರ ಕೊಲೆಯಾಗಿರುವ ರಕ್ತ ಸಿಕ್ತ ಘಟನೆಗೆ ತುಮಕೂರು ಸಾಕ್ಷಿಯಾಯಿತು.

ಅಜ್ಗರ್ ಬರ್ಬರವಾಗಿ ಕೊಲೆಯಾದ ಆಟೋ ಚಾಲಕ. ಗುರುವಾರ ಬೆಳಗ್ಗೆ ತುಮಕೂರಿನ ಹೇಮಾವತಿ ಕಚೇರಿ ಎದುರು ರಾಂಗ್ ಸೈಡ್‌ನಲ್ಲಿ ಆಟೋ ಚಲಾಯಿಸಿಕೊಂಡು ಬರುತ್ತಿದ್ದ. ಆಗ ರಸ್ತೆ ಬದಿ ಇದ್ದ ಫಯಾಜ್ ಮತ್ತು ಇರ್ಫಾನ್ ಎಂಬುವರು ಪ್ರಶ್ನಿಸಿದರು. ಈ ಗಲಾಟೆ ದೊಡ್ಡದಾಯಿತು. ಕೂಡಲೇ ಮಾರಕಾಸ್ತ್ರಗಳಿಂದ ಅಸ್ಗರ್‌ನನ್ನು ಬರ್ಬರವಾಗಿ ಕೊಂದು ಹಾಕಿದರು.

ಕೊಲೆಯಾದವನ ರಕ್ತ ಇಡೀ ರಸ್ತೆ ತುಂಬಾ ಹರಿಯುವಷ್ಟು ಭೀಕರವಾಗಿ ಕೊಲೆ ನಡೆದಿದೆ. ಕೊಲೆಯಾದ ಅಜ್ಗರ್ ತುಮಕೂರಿನ ನಜರಾಬಾದ್ ನಿವಾಸಿ. ವೃತ್ತಿಯಲ್ಲಿ ಆಟೋ ಚಾಲಕನಾಗಿದ್ದರೂ ತುಮಕೂರು ನಗರದ ತಿಲಕ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ವಸೂಲಿ, ಕಳ್ಳತನ ಹೀಗೆ ನಾನಾ ಕೇಸ್ ಈತನ ಮೇಲಿದೆ. ಸದ್ಯ ನಗರದಲ್ಲಿ ಆಟೋ ಓಡಿಸುತ್ತಿದ್ದ. ಇಂದೂ ಆಟೋ ಓಡಿಸಿಕೊಂಡು ಬರುವಾಗ ಈ ಘಟನೆ ನಡೆದಿದೆ. ಕೊಲೆ ಆರೋಪಿಗಳನ್ನು ಈಗಾಗಲೇ ತಿಲಕ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ. ರಾಜೀವ್ ಗಾಂಧಿ ನಗರದ ಫಯಾಜ್ ಹಾಗೂ ಇರ್ಫಾನ್ ಕೊಲೆ ಆರೋಪಿಗಳು. ಘಟನೆಯಲ್ಲಿ ಇರ್ಫಾನ್ ಹಾಗೂ ಫಯಾಜ್‌ಗೂ ಸಣ್ಣಪುಟ್ಟ ಗಾಯಗಳಾಗಿರುವುದರಿಂದ ಅವರನ್ನು ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ. ಪೊಲೀಸರು ಈ ಇಬ್ಬರು ಆರೋಪಿಗಳನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ವಂಶಿಕೃಷ್ಣ ರಾಂಗ್ ಸೈಡ್‌ನಲ್ಲಿ ಆಟೋ ಓಡಿಸುವ ವಿಚಾರಕ್ಕೆ ಗಲಾಟೆ ಆರಂಭವಾಗಿ ಕೊಲೆಯಲ್ಲಿ ಅಂತ್ಯವಾಗಿದೆ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಕೊಲೆಗೆ ಅಸಲಿ ಸಂಗತಿ ಏನೆಂಬುದು ತನಿಖೆಯಲ್ಲಿ ತಿಳಿಯಲಿದೆ ಎಂದರು.

# ಮರಳು ಅಡ್ಡೆ ಮೇಲೆ ದಾಳಿ: 3 ಟ್ರ್ಯಾಕ್ಟರ್, ಜೆಸಿಬಿ ವಶ

**ಕೊರಟಗೆರೆ:** ಖಾಸಗಿ ಜಮೀನಿನಲ್ಲಿ ಶೇಖರಿಸಿ ಬೆಂಗಳೂರಿಗೆ ಅಕ್ರಮವಾಗಿ ಸಾಗಿಸಲು ಲಾರಿಗಳಿಗೆ ಮರಳು ತುಂಬುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ ಮಾಲು ಸಮೇತ ಮೂರು ಟ್ರ್ಯಾಕ್ಟರ್ ಹಾಗೂ ಒಂದು ಜೆಸಿಬಿಯನ್ನು ವಶ ಪಡಿಸಿಕೊಂಡಿದ್ದಾರೆ.

ತಾಲೂಕಿನ ಚನ್ನರಾಯನದುರ್ಗ ಹೋಬಳಿ ಜೆಟ್ಟಿ ಅಗ್ರಹಾರ ಗ್ರಾಪಂ ವ್ಯಾಪ್ತಿಯ ಅಜ್ಜಿಹಳ್ಳಿ ಗ್ರಾಮದ ರಂಗಪ್ಪ ಎಂಬುವರ ಖಾಸಗಿ ಜಮೀನಿನಿಂದ ಅಕ್ರಮವಾಗಿ ಮಂಗಳವಾರ ಮಧ್ಯರಾತ್ರಿ ವೇಳೆ ಮರಳನ್ನು ಜೆಸಿಬಿಯ ಮೂಲಕ ಟ್ರ್ಯಾಕ್ಟರ್‌ಗಳಿಗೆ ತುಂಬುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ಪಿಎಸ್‌ಐ ಮಂಜುನಾಥ್ ನೇತೃತ್ವದ ತಂಡ ದಾಳಿ ನಡೆಸಿ ಸ್ಥಳದಲ್ಲಿದ್ದ 3 ಟ್ರ್ಯಾಕ್ಟರ್ ಮತ್ತು 1 ಜೆಸಿಬಿಯನ್ನು ಜಪ್ತಿ ಮಾಡಿದೆ.

ಅಜ್ಜಿಹಳ್ಳಿ ಗ್ರಾಮದ ರಂಗಪ್ಪ ಎಂಬುವರ ಖಾಸಗಿ ಜಮೀನಿನಿಂದ ಪ್ರತಿದಿನ ಅಕ್ರಮವಾಗಿ ಮರಳನ್ನು ಗ್ರಾಮದ ಹೊರವಲಯದ ನಿರ್ಜನ ಪ್ರದೇಶದಲ್ಲಿ ಶೇಖರಣೆ ಮಾಡಿ ನಂತರ ಅದನ್ನು ಲಾರಿಯ ಮೂಲಕ ಊರ್ಡಿಗೆರೆ-ದಾಬಸ್‌ಪೇಟೆ ಮಾರ್ಗವಾಗಿ ಬೆಂಗಳೂರಿಗೆ ಸಾಗಿಸಲಾಗುತ್ತಿತ್ತು ಎನ್ನುವ ದೂರುಗಳು ದಾಖಲಾಗಿದ್ದವು.

ದಾಳಿ ವೇಳೆ ಕೊರಟಗೆರೆ ಪೊಲೀಸ್ ಸಿಬ್ಬಂದಿ ಮಲ್ಲಿಕಾರ್ಜುನ್, ಚಂದ್ರಶೇಖರ್, ಸಿದ್ದಲಿಂಗಪ್ರಸನ್ನ, ದೊಡ್ಡಲಿಂಗಯ್ಯ, ಕೃಷ್ಣಪ್ಪ ಹಾಜರಿದ್ದರು. ಜಮೀನು ಮಾಲೀಕ ರಂಗಪ್ಪ ಸೇರಿ ಜೆಸಿಬಿ ಮತ್ತು 3 ಟ್ರ್ಯಾಕ್ಟರ್ ಮೇಲೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**11ಕ್ಕೆ ಕಚೇರಿಗೆ ಮುತ್ತಿಗೆ** | ರೈತರನ್ನು ರಕ್ಷಿಸದ ಕಾಂಗ್ರೆಸ್, ಜೆಡಿಎಸ್, ಬಿಜೆಪಿ | ಎನ್‌ಎಚ್-206 ಸಂತ್ರಸ್ತ ಹೋರಾಟ ಸಮಿತಿ ಕಿಡಿ

# ಭೂ ಸ್ವಾಧೀನ ಉಗ್ರರ ದಾಳಿ: ರೈತರ ಆಕ್ರೋಶ

• **ಕನ್ನಡಪ್ರಭ ವಾರ್ತೆ** ತುಮಕೂರು

ತುಮಕೂರು- ಶಿವಮೊಗ್ಗ ರಸ್ತೆ ಚತುಷ್ಪತ ಹಾಗೂ ಬೈಪಾಸ್ ರಸ್ತೆ ನಿರ್ಮಾಣದಲ್ಲಿ ಭೂ ಸ್ವಾಧೀನ ಉಗ್ರರ ದಾಳಿಯಾಗಿದ್ದು, ರೈತರನ್ನು ರಕ್ಷಿಸುವಲ್ಲಿ ಆಡಳಿತರೂಢ ಕಾಂಗ್ರೆಸ್-ಜೆಡಿಎಸ್, ವಿರೋಧ ಪಕ್ಷ ಬಿಜೆಪಿ ವಿಫಲ ವಾಗಿವೆ ಎಂದು ಎನ್‌ಎಚ್-206 ಸಂತ್ರಸ್ತ ಹೋರಾಟ ಸಮಿತಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ತುಮಕೂರಿನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರಾದ ರೈತ ಕೃಷಿ ಕಾರ್ಮಿಕರ ಸಂಘಟನೆಯ ಎಸ್.ಎನ್.ಸ್ವಾಮಿ, ಆನಂದ್, ಮನೋಹರ್ ಇತರರು, ಈ ಸಂಬಂಧ ರಾಜ್ಯ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ರೈತಪರ ಕಾಳಜಿಯಿಲ್ಲದೆ ವರ್ತಿಸುತ್ತಿದೆ. ವಿರೋಧ ಪಕ್ಷ ಬಿಜೆಪಿ ರೈತರಿಗೆ ಸ್ಪಂದಿಸುತ್ತಿಲ್ಲ. ಈ ಸಂಬಂಧ ತಿಪಟೂರು ಶಾಸಕ ಬಿ.ಸಿ.ನಾಗೇಶ್, ವಿರೋಧ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಳಲು ತೋಡಿಕೊಂಡರು.

**ರೈತರ ಬೇಡಿಕೆಗಳಿಗೆ ಕಿಂಚಿತ್ತು ಬೆಲೆ ಇಲ್ಲ:** ಭೂಸ್ವಾಧಿನ ಪ್ರಕ್ರಿಯೆಯಲ್ಲಿ ರೈತರಿಗೆ ನೀಡಬೇಕಾದ ಪರಿಹಾರವನ್ನೇ ಬೈಪಾಸ್ ಮಾಡಿ



ಸುದ್ದಿಗೋಷ್ಠಿಯಲ್ಲಿ ಎಸ್.ಎನ್. ಸ್ವಾಮಿ, ಆನಂದ್, ಮನೋಹರ್ ಇತರರು ಉಪಸ್ಥಿತರಿದ್ದರು.

ತರಾತುರಿಯಲ್ಲಿ ಕಾಮಗಾರಿ ಆರಂಭಿಸಲಾಗಿದೆ. ಈಗಾಗಲೇ ಶಂಕುಸ್ಥಾಪನೆ ಕಾರ್ಯ ನೆರವೇರಿಸಲಾಗಿದೆ. ಆದರೆ ರಸ್ತೆ ಅಗಲೀಕರಣದಿಂದ ಭೂಮಿ, ಮನೆ, ನಿವೇಶನ ಸೇರಿ ಸರ್ವಸ್ವವನ್ನು ಕಳೆದುಕೊಳ್ಳುವ ಸಂತ್ರಸ್ತ ರೈತರ ಬೇಡಿಕೆಗಳಿಗೆ ಕಿಂಚಿತ್ತು ಬೆಲೆ ಕೊಡದೆ, ಏಕಪಕ್ಷೀಯವಾಗಿ, ಭೂಸ್ವಾಧೀನ ಅಧಿಕಾರಿಗಳು, ರೈತರ ಭೂಮಿಗೆ ನಿಕೃಷ್ಟ ಪರಿಹಾರ ಮೊತ್ತವನ್ನು ಘೋಷಣೆ ಮಾಡಿ ಘೋರ ಅನ್ಯಾಯ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಹೆದ್ದಾರಿಗಾಗಿ ಜೀವನಾಧಾರವನ್ನೇ ಕಳೆದುಕೊಳ್ಳುವ ನಮ್ಮನ್ನು ಮೂರು ವರ್ಷಗಳಿಂದ ಕಚೇರಿಗಳಿಗೆ ಅಲೆದಾಡಿಸುತ್ತಾ, ನಮ್ಮ ಭೂಮಿ-ಬದುಕಿಗೆ ಪುಡಿಗಾಸಿನ ಬೆಲೆ ಕಟ್ಟಿ, ನಮ್ಮನ್ನು ಬೀದಿಪಾಲು ಮಾಡಿ, ನಮ್ಮ ಅಮೂಲ್ಯ ಭೂಮಿಯನ್ನು ಟೋಲ್ ಮಾಫಿಯಾದ ಮಡಿಲಿಗೆ ಹಾಕಲು ಸರ್ಕಾರವೇ ಏಜೆಂಟಾಗಿ ಕೆಲಸ ಮಾಡುತ್ತಿದೆ ಎಂದು ದೂರಿದರು.

**ಡಿಸಿಎಂ, ಸಂಸದರ ಸೂಚನೆಗೂ ಬಗ್ಗಿಲ್ಲ:** ಈ ಹಿಂದೆ ರೈತ-ಕೃಷಿ ಕಾರ್ಮಿಕ ಸಂಘಟನೆ(ಆರ್‌ಕೆಎಸ್) ಹಾಗೂ ರಾಷ್ಟ್ರೀಯ ಹೆದ್ದಾರಿ-206 ಸಂತ್ರಸ್ತರ ಹೋರಾಟ ಸಮಿತಿ, ರಾಜ್ಯ ರೈತ ಸಂಘಟನೆಗಳು ಪ್ರತಿಭಟನೆ, ಸಮಾವೇಶ ನಡೆಸಿ ಸಂತ್ರಸ್ತರ ಸಮಗ್ರ ಸಮಸ್ಯೆಗಳನ್ನು ಜನಪ್ರತಿನಿಧಿಗಳ ಗಮನಕ್ಕೆ ತರಲಾಗಿತ್ತು. ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹಾಗೂ ಸಂಸದ ಮುದ್ದಹನಮೇಗೌಡರು ಸಂತ್ರಸ್ತರೊಂದಿಗೆ ಸಭೆ ನಡೆಸಿ, ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಆದರೆ ಈಗ ಜನಪ್ರತಿನಿಗಳ ಮಾತಿಗೂ ಗೌರವ, ಬೆಲೆ ನೀಡದೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸರ್ವಾಧಿಕಾರಿ ಧೋರಣೆಯಿಂದ ರೈತರ ಫಲವತ್ತಾದ ಭೂಮಿಗೆ ಬಿಡಿಗಾಸಿನ ಬೆಲೆ ಕಟ್ಟಿ ಅನ್ನದಾತರನ್ನು ಮಣ್ಣುಪಾಲು ಮಾಡಲು ಹೊರಟಿದೆ ಎಂದು ಆತಂಕವ್ಯಕ್ತಪಡಿಸಿದರು.

**11ಕ್ಕೆ ಮುತ್ತಿಗೆ:** ಹೀಗಾಗಿ ಪುಡಿಗಾಸಿನ ಪರಿಹಾರವನ್ನು ತಿರಸ್ಕರಿಸುತ್ತಾ, ಈ ಬೆಲೆಗೆ ಯಾವುದೇಕಾರಣಕ್ಕೂ ಭೂಮಿ ಕೊಡುವುದಿಲ್ಲ, ಈ ಯೋಜನೆಯೇ ಬೇಡ ಎಂದು ಘೋಷಣೆ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ವಿವಿಧ ಸಂಘಟನೆಗಳ ಜೊತೆಗೂಡಿ ಯೋಜನೆ ವಿರೋಧಿಸಿ, 2019ರ ಮಾರ್ಚ್ 11ರಂದು ತುಮಕೂರಿನಲ್ಲಿರುವ ರಾಷ್ಟ್ರೀಯ ಹೆದ್ದಾರಿ 206ರ ಯೋಜನಾ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಲ್ಯಾಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.